**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**Spl.C.No.14/2023**

ದಿನಾಂಕ 11.12.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 5 ಪ್ರಾಸಾ - 7

| | | |
|---|---|---|
| ಹೆಸರು | ः | ಇಮ್ತಿಯಾಜ್ |
| ತಂದೆಯ ಹೆಸರು | ः | ನಿಸಾರ್ ಅಹಮದ್ |
| ವಯಸ್ಸು | ः | 32 ವರ್ಷ |
| ಉದ್ಯೋಗ | ः | ಕೂಲಿ ಕೆಲಸ |
| ವಾಸಸ್ಥಳ | ः | ಮೆಹಬೂಬ್ ನಗರ, ಫೂಲ್ ಬಾಗ್, |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಪ್ರಾಸಾ 1 ಶಿಲ್ಪಾ ನನಗೆ ಗೊತ್ತು. ಪ್ರಾಸಾ 1 ಶಿಲ್ಪಾ ಯಾವ ಜಾತಿಗೆ ಸೇರಿದವರು ಎಂದು ನನಗೆ ಗೊತ್ತಿಲ್ಲ. ಚಾಸಾ 6 ಮುಜೀರ್ ಅಹಮದ್ ನನಗೆ ಗೊತ್ತಿಲ್ಲ. ಪ್ರಾಸಾ 6 ಇರ್ಫಾನ್ ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ 1 ರಿಂದ 3ನೇ ಆರೋಪಿಗಳನ್ನು ನೋಡಿ ಪರಿಚಯವಿದೆ. ಅವರು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರಾಸಾ 1 ರವರು ನಾಜೀಮ್ ಪಾಷ ರವರ ಫೀಲೇಚೆರಿಗೆ ಕೆಲಸಕ್ಕೆ ಬರುವ ಮೊದಲು ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

2. ಶಿಲ್ಪಾ ರವರ ಜೊತೆ ಯಾರು ಯಾವಾಗ ಎಲ್ಲಿ ಗಲಾಟೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಗಳು ಶಿಲ್ಪಾ ರವರ ಜೊತೆ ಗಲಾಟೆ ಮಾಡಿರುವ ವಿಚಾರವಾಗಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ವಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

**ವಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3. ಪ್ರಾಸಾ 1 ಶಿಲ್ಪಾ ರವರು ನಾಜೀಮ್ ಪಾಷ ರವರ ಫಿಲೇಚರಿಗೆ ಕೆಲಸಕ್ಕೆ ಬರುವಕ್ಕಿಂತ ಪೂರ್ವದಲ್ಲಿ ಆರೋಪಿಗಳಿಗೆ ಸೇರಿದ ಫಿಲೆಚರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಶಿಲ್ಪಾ ಕೆಲಸ ಮಾಡುತ್ತಿದ್ದಂತಹ ನಾಜೀಮ್ ಪಾಷ ರವರ ಫಿಲೇಚರಿಯಲ್ಲಿ ಆರೋಪಿಗಳು ಶಿಲ್ಪಾ ರವರ ಜೊತೆ ಗಲಾಟೆ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು ಹಾಗು ನಾನು ಪೊಲೀಸರ ಸಮಕ್ಷಮ "ದಿನಾಂಕ 04.07.2022 ರಂದು ನಾನು, ಶಿಲ್ಪಾ .................................... ಜಗಳ ಬಿಡಿಸಿ ಸಮಾಧಾನ ಪಡಿಸಿದೆವು" ಎಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ 8 ಎಂದು ಗುರುತಿಸಲಾಯಿತು. ನಾನು ಮತ್ತು ಆರೋಪಿಗಳು ಒಂದೇ ಮತಕ್ಕೆ ಸೇರಿದವರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಶ್ರೀ.ವಿ.ಎಸ್.ಎಸ್., ವಕೀಲರಿಂದ ಆರೋಪಿಗಳ ಪರವಾಗಿಃ ಏನೂ ಇಲ್ಲವೆಂದು ತಿಳಿಸಿರುತ್ತಾರೆ.**

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.